ಹಾಗೆ ಅಲುಗಾಡುವುದು ಯಾಕಿರಬಹುದು? ದೆವ್ವ, ಭೂತ ಏನಾದರೂ? ತಾನಿಲ್ಲಿ ಒಬ್ಬನೇ ಇದ್ದೇನೆ ಬೇರೆ. ನಿಹಾಲ ಭಯ, ಕುತೂಹಲದಿಂದ ನೋಡತೊಡಗಿದ. ಮಂಗಗಳು! ಆ ಕೊಂಬೆಯಿಂದ ಈ ಕೊಂಬೆಗೆ, ಈ ಕೊಂಬೆಯಿಂದ ಆ ಕೊಂಬೆಗೆ ಉಯ್ಯಾಲೆ ಆಡುತ್ತಿವೆ! ಮರಿ ಮಂಗಗಳೂ ಇವೆ! ಅವು ಎಲ್ಲಾದರೂ ಕೆಳಗೆ ಬಿದ್ದುಬಿಟ್ಟರೆ ಅಂತ ನಿಹಾಲ್ ಹೆದರಿದ. ಆದರೆ ಎಷ್ಟು ಹೊತ್ತು ಜೋಕಾಲಿಯಾಡಿದರೂ ಒಂದು ಮಂಗವೂ ಕೆಳಕ್ಕೆ ಬೀಳಲಿಲ್ಲ. ಮೊಬೈಲ್ ತರಬೇಕಿತ್ತು, ಎಷ್ಟು ಒಳ್ಳೆಯ ವಿಡಿಯೊ ಮಾಡಬಹುದು ಅನಿಸಿತು ಅವನಿಗೆ.

ಬೆಂಗಳೂರಿಗೆ ಹೋಗಿದ್ದ ಪಕ್ಕದ ಮನೆಯ ಸಂತೋಷ ಮೂರೇ ದಿನಕ್ಕೆ ಹಿಂದಿರುಗಿ ಬಂದಿದ್ದ. ಅವನು ನಿಹಾಲನನ್ನು ಹುಡುಕಿಕೊಂಡು ನಿಹಾಲನ ಮನೆಗೆ ಬಂದಾಗ ನಿಹಾಲ್ ಮೊಬೈಲು ಮತ್ತು ಚೀಲ ಹಿಡಿದುಕೊಂಡು ಗುಡ್ಡಕ್ಕೆ ಹೊರಟಿದ್ದ.

'ಹಾಯ್ ನಿಹಾಲ್, ನಾನು ಬಂದುಬಿಟ್ಟೆ. ಎಲ್ಲಿಗೆ ಹೊರಟಿದ್ಯೋ ನೀನು?' ಎಂದು ಸಂತೋಷ ಪ್ರಶ್ನಿಸಿದ. ನಿಹಾಲನಿಗೆ ಸಂತೋಷ ಇಷ್ಟು ಬೇಗ ಬೆಂಗಳೂರಿಂದ ಬಂದದ್ದು ಆಶ್ಚರ್ಯವೆನಿಸಿದರೂ ತನಗೊಂದು ಜೊತೆಯಾಯ್ತು ಅಂತ ಸಂತೋಷವೂ ಆಗಿತ್ತು.

'ಎಲ್ಲಿಗೆ ಹೊರಟಿದ್ಯೋ ನಿಹಾಲ್? ನಾನು ನಿನ್ನ ಜತೆ ಆಟವಾಡೋಣ ಅಂತ ಬಂದೆ' ಅಂದ ಸಂತೋಷ.

'ಗುಡ್ಡೆಗೆ ಹೋಗ್ತಿದ್ದೇನೆ, ಬರ್ತಿಯಾ? ಬಾ ನೀನೂ' ಎಂದು ನಿಹಾಲ್ ಸಂಭ್ರಮದಿಂದ ಸಂತೋಷನನ್ನು ಕರೆದ.

ನಿಹಾಲ್ ಮತ್ತು ಸಂತೋಷ್ ಸಂತೋಷದಿಂದ ಮಾತಾಡಿಕೊಳ್ತಾ ಗುಡ್ಡ ಹತ್ತಿದರು. ಸಂತೋಷ್ ಗುಡ್ಡದ ತುದಿಯನ್ನು ಏರಿದವನೇ ಬಹಳ ಸಂತೋಷದಿಂದ, 'ವಾವ್! ಎಷ್ಟು ಚೆನ್ನಾಗಿದೆಯೋ! ನೀನು ಇದಕ್ಕೇನೇ ಎಲ್ಲಿಗೂ ಟೂರ್ ಹೋಗದೆ ಕುಳಿತದ್ದಾ? ನನಗೆ ಹೇಳಿದ್ದರೆ ನಾನೂ ನಿಲ್ಲುತ್ತಿದ್ದೆ. ಎಷ್ಟು ದೂರದ ಊರುಗಳು ಇಲ್ಲಿಂದ ಕಾಣುತ್ತಿವೆ ಅಲ್ವಾ? ಇಲ್ಲಿ ಫೋಟೊ ಹಿಡಿದರೆ ಬೊಂಬಾಟಾಗಿ ಬರುತ್ತೆ. ಇವತ್ತು ನಮಗೆ ಇದೇ ಕೆಲಸ. ನಿನ್ನ ಫೋಟೊ ನಾನು ಹಿಡಿಯುವುದು, ನನ್ನದನ್ನು ನೀನು' ಅಂದ.

'ಬೆಂಗಳೂರಿನ ಟೂರ್ ಹೇಗಿತ್ತೋ?' ನಿಹಾಲ್ ಕೇಳಿದ.

'ಥೂ! ಇನ್ನು ನಾನು ಬೆಂಗಳೂರಿಗೆ ಹೋಗಲ್ಲ ಕಣೋ. ಯಾಕೆ ಹೋದೆನೋ ಅನಿಸ್ತಿದೆ. ಗಲೀಜು ಅಂದ್ರೆ ಗಲೀಜು ಮಾರಾಯ. ನಾವು ಬಸ್ಸಲ್ಲಿ ವಿಧಾನಸೌಧ ನೋಡಲು ಹೋಗಿದ್ದೆವು. ಎಂಥ ಟ್ರಾಫಿಕ್ ಜಾಮ್ ಗೊತ್ತಾ? ಐದೈದು ನಿಮಿಷಕ್ಕೊಮ್ಮೆ ಬಸ್ಸು ನಿಲ್ಲುತ್ತಿತ್ತು. ಇದಕ್ಕಿಂತ ನಡೆದೇ ಹೋಗಬಹುದು ಅನಿಸಿತು ನನಗೆ. ಮತ್ತೆ ಆ ವಿಧಾನಸೌಧ ನೋಡಿ ನನಗೇನೂ ವಿಶೇಷ ಅನಿಸಲಿಲ್ಲ. ನಾನು ವಿಧಾನಸೌಧ ನೋಡಿದೆ ಅಂತ ಹೇಳಲಿಕ್ಕೆ ನನಗೇನೂ ಸಂತೋಷವಿಲ್ಲ. ಇನ್ನು ಆ ಲಾಲ್ ಬಾಗ್. ಅಲ್ಲೂ ಅಷ್ಟು ವಿಶೇಷ ನನಗೆ ಕಾಣ್ಲಿಲ್ಲ. ಅಂಥ ಉದ್ಯಾನಗಳು ಇಲ್ಲೂ ಇವೆ. ಕಬ್ಬನ್ ಪಾರ್ಕ್‌ಗೆ ಹೋಗುವುದಕ್ಕಿಂತ ಈ ಗುಡ್ಡೆಯೇ ಸಾವಿರ ಪಾಲು ಚೆನ್ನಾಗಿದೆ ಕಣೋ. ಮತ್ತೆ ಬನ್ನೇರುಘಟ್ಟದಲ್ಲಿ ನನಗೆ ಯಾವ ಪ್ರಾಣಿಯೂ ಕಾಣಿಸಲಿಲ್ಲ. ನಮಗೆ ಕಾಡು ನೋಡಬೇಕಾದರೆ ಇಲ್ಲೇ ರಕ್ಷಿತಾರಣ್ಯ ಇದೆಯಲ್ಲ? ನಾನೂ ನೀನೂ ಹೋಗಿಬರೋಣ. ಮಣ್ಣಾಂಗಟ್ಟಿಯೂ ಇಲ್ಲ ಬೆಂಗಳೂರಿನಲ್ಲಿ. ಅದು ಅಲ್ಲದೆ ಅಲ್ಲಿ ತುಂಬಾ ಕೊರೊನಾ ಕೇಸುಗಳಿವೆಯಂತೆ. ಹೆದರಿಕೊಂಡೇ ಹೋದದ್ದು. ಸ್ಯಾನಿಟೈಸರುಗಳನ್ನು ಅಲ್ಲಲ್ಲಿ ಹಚ್ಚಿಕೊಳ್ತಾ, ಮುಖಕ್ಕೆ ಮಾಸ್ಕ್ ಕಟ್ಟಿಕೊಂಡು ಓಡಾಡ್ಬೇಕು. ಇಲ್ಲಿ ಮಾಸ್ಕೂ ಬೇಡ, ಸ್ಯಾನಿಟೈಸರೂ ಬೇಡ. ನೀನೇ ಲಕ್ಕಿ ಕಣೋ. ನಾನೂ ಬೆಂಗಳೂರಿಗೆ ಹೋಗಬಾರದಿತ್ತು. ಇಲ್ಲಿ ಇಷ್ಟು ಚೆನ್ನಾಗಿರುತ್ತದೆ ಎಂದು ನನಗೆ ಗೊತ್ತಿರಲಿಲ್ಲ'.

ನಿಹಾಲ್ ಕಣ್ಣು ಕಣ್ಣು ಬಿಟ್ಟು ಸಂತೋಷನ ಮಾತುಗಳನ್ನು ಕೇಳುತ್ತಲೇ ಇದ್ದ. ಬೆಂಗಳೂರಿಗೆ

